**ಸಾಕ್ಷಿಯನ್ನು ದಿನಾಂಕ: 18-07-2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**
**ಮುಂದುವರೆದ ಪಾಟೀ ಸವಾಲು :- ವಾದಿಗಳ ಪರ ವಕೀಲರಿಂದಃ**

ವಾದಿಗಳು ಯಾರು ಎಂದು ನನಗೆ ಗೊತ್ತಿಲ್ಲ. ನಾನು ವಾದಿಗಳನ್ನು ನ್ಯಾಯಾಲಯದಲ್ಲಿ ಮಾತ್ರ ನೋಡಿರುತ್ತೇನೆ. ನಿಡಿ-1 ರಲ್ಲಿ ನಮ್ಮ ತಂದೆಯ ಸಹೋದರರ ಕುಟುಂಬದ ಸದಸ್ಯರನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ನಮ್ಮ ತಾತ ತಿಮ್ಮಯ್ಯರವರಿಗೆ ಒಟ್ಟು 3 ಜನ ಸಹೋದರ ಮತ್ತು ಸಹೋದರಿಯರು. ತಿಮ್ಮಯ್ಯರವರ ತಂದೆಯ ಹೆಸರು ಬಾಗಲೂರು ಕಾಳಪ್ಪ. ಅವರು ಮೊದಲು ಬಾಗಲೂರಿನಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಬಾಗಲೂರು ಕಾಳಪ್ಪ ಎಂದರೆ ನಮ್ಮ ಮುತ್ತಾತ. ಸದರಿ ಬಾಗಲೂರು ಕಾಳಪ್ಪರವರಿಗೆ ಒಟ್ಟು 4 ಜನ ಮಕ್ಕಳು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಯಿಲ್ಲ. ಬಾಗಲೂರು ಕಾಳಪ್ಪರವರಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ. ಬಾಗಲೂರು ಕಾಳಪ್ಪನ ಹೆಂಡತಿಯ ಹೆಸರು ಚಿನ್ನಮ್ಮ. ಅವರ ಪತ್ನಿಯ ಹೆಸರು ಮುನಿಯಮ್ಮ ಎಂದರೆ ಸರಿಯಲ್ಲ. ಬಾಗಲೂರು ಕಾಳಪ್ಪನ ಹೆಂಡತಿಯ ಹೆಸರು ಚಿನ್ನಮ್ಮ ಎಂದು ತೋರಿಸಲು ನನ್ನ ಬಳಿ ದಾಖಲೆಯಿಲ್ಲ. ನಮ್ಮ ತಂದೆ ಹೇಳುತ್ತಿರುವುದನ್ನು ನಾನು ಹೇಳುತ್ತಿದ್ದೇನೆ. ಬಾಗಲೂರು ಕಾಳಪ್ಪ ಮತ್ತು ಮುನಿಯಮ್ಮರವರಿಗೆ ತಿಮ್ಮಯ್ಯ, ಚಿನ್ನಪ್ಪಯ್ಯ, ಮುನಿಯಪ್ಪ ಉರ್ಫ ಕುರಲಪ್ಪ ಮತ್ತು ಹನುಮಪ್ಪ ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿಯಲ್ಲ. ಹನುಮಪ್ಪ ಮತ್ತು ಅವರ ಪತ್ನಿ ತಿಮ್ಮಕ್ಕ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪ ಉರ್ಫ್ ಕುರಲಪ್ಪರವರ ಪತ್ನಿಯ ಹೆಸರು ನನಗೆ ಗೊತ್ತಿಲ್ಲ. ಮುನಿಯಪ್ಪ ಉರ್ಫ್ ಕುರಲಪ್ಪ ರವರ ಪತ್ನಿಯ ಹೆಸರು ಮುದ್ದಮ್ಮ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುದ್ದಮ್ಮರವರ ಮನೆ ಮಾಳಿಗೇನಹಳ್ಳಿ ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪ ಮುದ್ದಮ್ಮರರನ್ನು ಮದುವೆ ಮಾಡಿಕೊಂಡು ಮಾಳಿಗೇನಹಳ್ಳಿಗೆ ಹೋಗಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಮೊಮ್ಮಕ್ಕಳು ಈ ದಾವೆಯ ವಾದಿಗಳಾಗಿದ್ದು, ಅವರೂ ಸಹ ಮಾಳಿಗೇನಹಳ್ಳಿಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಾಗಲೂರು ಕಾಳಪ್ಪ ಕಡತನಮಲ್ಲೇಗೆ ಹೋಗಿ ವಾಸವಿದ್ದರು ಎಂದರೆ ಸರಿಯಲ್ಲ. ಬಾಗಲೂರು ಕಾಳಪ್ಪನವರ 4 ಜನ ಮಕ್ಕಳು ಯರ್ತಿಗಾನಹಳ್ಳಿಯಲ್ಲಿ ವಾಸವಿದ್ದರು ಹಾಗೂ ಆ ನಂತರ ಚಿನ್ನಪ್ಪಯ್ಯ ಮತ್ತು ಮುನಿಯಪ್ಪ ಬೇರೆ ಊರಿಗೆ ಹೋಗಿ ನೆಲಿಸಿರುತ್ತಾರೆ ಎಂದರೆ ಸರಿಯಲ್ಲ. ತಿಮ್ಮಯ್ಯರವರು ಯರ್ತಿಗಾನಹಳ್ಳಿಯಲ್ಲಿ ವಾಸವಿದ್ದರು ಎಂದರೆ ಸರಿ. ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಈಗ ಯರ್ತಿಗಾನಹಳ್ಳಿಯಲ್ಲಿ ವಾಸವಿರುತ್ತೇವೆ ಎಂದರೆ ಸರಿ. ಬಾಗಲೂರು ಕಾಳಪ್ಪನವರ 4 ಜನ ಮಕ್ಕಳಿಗೆ ಯರ್ತಿಗಾನಹಳ್ಳಿಯಲ್ಲಿ ಮನೆಗಳಿದ್ದು, ಅವು ಈಗ ಬಿದ್ದು ಹೋಗಿರುತ್ತವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ಕಾಳಪ್ಪನವರ 4 ಜನ ಮಕ್ಕಳ ಪೈಕಿ ಹನುಮಯ್ಯರವರನ್ನು ಹೊರತಾಗಿ ಉಳಿದವರ ವಾರಸುದಾರರಿಗೆ ಸಮಾನ ಭಾಗ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಈಗ ತಿಮ್ಮಯ್ಯರವರ 7 ಜನ ಮಕ್ಕಳ ಹೆಸರಿನಲ್ಲಿ ಜಂಟಿಯಾಗಿ ಇದೆ. ದಾವಾ ಐಟಂ ನಂ.2, 2 ಎಕರೆ 28 ಗುಂಟೆ, 3 ಗುಂಟೆ ಕರಾಬು ಸೇರಿಸಿ 1967 ರಲ್ಲಿ ಮಾಳೀಗಪ್ಪ ಎಂಬವರಿಂದ ನಮ್ಮ ತಂದೆಗೆ ಕ್ರಯ ಆಗಿರುತ್ತದೆ. ಆ ಬಗ್ಗೆ ಕ್ರಯಪತ್ರವನ್ನು ಹಾಜರು ಮಾಡಿರುತ್ತೇನೆ. ಸದರಿ ಸ್ವತ್ತು ಸಹ ಮೇಲೆ ಹೇಳಿದ 7 ಜನರ ಹೆಸರಿನಲ್ಲಿ ಜಂಟಿಯಾಗಿ ಇದೆ. ಸರ್ವೆ ನಂ.4 ರ ಪೈಕಿ 1½ ಎಕರೆ ಜಮೀನನ್ನು ನಮ್ಮ ತಂದೆ ಹೆಸರಿಗೆ ವಾದಿಗಳು ನೋಂದಣಿ ಮಾಡಿಕೊಟ್ಟಿರುತ್ತಾರೆ. ಸದರಿ ಕ್ರಯಪತ್ರವನ್ನು ಹಾಜರು ಮಾಡಿಲ್ಲ, ಅದನ್ನು ಹಾಜರು ಮಾಡುತ್ತೇನೆ. ದಾವಾ ಐಟಂ ನಂ.3 ನಮ್ಮ ತಾಯಿ ಮತ್ತು ಚಿಕ್ಕಪ್ಪನ ಹೆಸರಿನಲ್ಲಿದೆ. ದಾವಾ ಐಟಂ ನಂ.4 ನ್ನು ಕೆ.ಐ.ಎ.ಡಿ.ಬಿ. ಯವರು ಭೂ-ಸ್ವಾಧೀನ ಮಾಡಿಕೊಂಡಿರುತ್ತಾರೆ. ಅದರ ಪರಿಹಾರದ ಹಣವನ್ನು ನಮ್ಮ ದೊಡ್ಡಪ್ಪ ಮುನಿಶಾಮಪ್ಪರವರು ಪಡೆದಿರುತ್ತಾರೆ. ನನ್ನ ಮತ್ತು ನನ್ನ ಸಹೋದರ ಮತ್ತು ಸಹೋದರಿಯರ ಮಧ್ಯೆ ಯಾವುದೇ ವಿಭಾಗ ಆಗಿರುವುದಿಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರ ಮಧ್ಯೆ 1971 ರಲ್ಲಿ ಮೌಖಿಕವಾಗಿ ವಿಭಾಗ ಆಗಿರುತ್ತದೆ. ಆ ಬಗ್ಗೆ ಯಾವುದೇ ವಿಭಾಗ ಪತ್ರ ಇಲ್ಲ, ಕೆ.ಐ.ಎ.ಡಿ.ಬಿ. ಕೊಟ್ಟಿರುತ್ತೇವೆ. ಅದನ್ನು ವಾಪಸ್ಸು ನೀಡುವಂತೆ ಕೆ.ಐ.ಎ.ಡಿ.ಬಿ. ಅರ್ಜಿ ಸಲ್ಲಿಸಿದ್ದು, ಅವರು ಸಿಗುತ್ತಿಲ್ಲ ಎಂದು ಹೇಳಿರುತ್ತಾರೆ. ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆ ಇದೆಯೋ ಎಂದು ಮನೆಯಲ್ಲಿ ಹುಡಕಬೇಕು. 2009 ರಲ್ಲಿ ಸದರಿ ದಾಖಲೆಯನ್ನು ಕೆ.ಐ.ಎ.ಡಿ.ಬಿ. ಗೆ ನೀಡಿರುತ್ತೇವೆ. ವಿಭಾಗ ಪತ್ರದ ಮೂಲ ದಾಖಲೆ ನಮ್ಮ ದೊಡ್ಡಪ್ಪ ಮುನಿಶಾಮಪ್ಪನವರ ಬಳಿ ಇತ್ತು. ವಿಭಾಗ ಪತ್ರದ ಪ್ರತಿಯನ್ನು ನಮ್ಮ ಬಳಿ ಇಟ್ಟುಕೊಂಡಿರುವುದಿಲ್ಲ. ವಂಶವೃಕ್ಷವನ್ನು ತಹಶೀಲ್ದಾರರಿಂದ ಮಹಜರ್ ಮಾಡಿಸಿ ಪಡೆದುಕೊಂಡಿರುವುದಿಲ್ಲ. ದಾವಾ ಸ್ವತ್ತಿನ ಹಳೇ ಪಹಣಿಗಳು ಕಾಳಪ್ಪನ ಮಕ್ಕಳು ಮುನಿಶಾಮಪ್ಪ ಮತ್ತು ಮುನಿಯಪ್ಪರವರ ಹೆಸರಿನಲ್ಲಿ ಬಂದಿದ್ದವು ಎಂದರೆ ಸರಿಯಲ್ಲ. ನಾನು ಹಳೇ ಪಹಣಿಗಳನ್ನು ನೋಡಿರುತ್ತೇನೆ. ಸದರಿ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಪಹಣಿಗಳಲ್ಲಿ ಪಿತ್ರಾರ್ಜಿತ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳ ಬಗ್ಗೆ ಐ.ಎಲ್. ಮತ್ತು ಆರ್.ಆರ್. ಬಗ್ಗೆ ಸದರಿ ಹೆಸರುಗಳಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗಳನ್ನು ನೋಡಿರುತ್ತೇನೆ. ಅವುಗಳನ್ನು ಈಗಾಗಲೇ ಹಾಜರು ಮಾಡಿರುತ್ತೇನೆ. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ 3/1 ಭಾಗ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಗಳ ಕಾಳಪ್ಪರವ

ವಾರಸುದಾರರಾಗಿದ್ದರೂ ಸಹ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರಕವಾಗಿ ಸಂಪೂರ್ಣ ವಂಶವೃಕ್ಷವನ್ನು ಹಾಜರು ಮಾಡದೇ ನಮ್ಮ ತಂದೆಯ ವಂಶವೃಕ್ಷವನ್ನು ಮಾತ್ರ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳು ಹಾಜರು ಮಾಡಿದ ವಂಶವೃಕ್ಷವನ್ನು ನೋಡಿರುತ್ತೇನೆ, ಅದು ಸುಳ್ಳು ಎಂದು ನುಡಿಯುತ್ತೇನೆ. ಆ ಬಗ್ಗೆ ತಹಶೀಲ್ದಾರರವರಿಗೆ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ವಾದಿಗಳಿಗೆ ಭಾಗ ಕೊಡಬೇಕಾಗುತ್ತಿದೆ ಎಂಬ ಕಾರಣಕ್ಕೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**